## ಮೇಲು-ಕೀಳು ಸಲ್ಲದು

ಕನ್ನಡದ ಬಿಗ್ ಬಾಸ್ ಶುರುವಾಗಿ 2–3 ವಾರಗಳು ಆಯಿತಷ್ಟೇ. ಆದರೆ ಪ್ರತಿನಿತ್ಯ ಜಗಳವಾಡುವುದು, ವಾದ ಮಾಡುವುದೇ ಆಯಿತು. ಜನ ಸಾಮಾನ್ಯ– ಸೆಲೆಬ್ರಿಟಿಗಳ ನಡುವೆ ನಾನು ಮೇಲು–ನಾನು ಕೀಳು ಎಂಬ ಕಿತ್ತಾಟ. ಹಾಗಾದರೆ ಯಾಕೆ ಜನ ಸಾಮಾನ್ಯರಿಗೆ ಬಿಗ್‌ಬಾಸ್ ಮನೆಯಲ್ಲಿ ಇರಲು ಅವಕಾಶ ಕೊಟ್ಟಿದ್ದೀರಿ. ಸೆಲೆಬ್ರಿಟಿಗಳಿಗಷ್ಟೇ ಬಿಗ್‌ಬಾಸ್ ಮನೆಯಲ್ಲಿ ಜಾಗ ಕೊಡುಬಹುದಿತ್ತಲ್ಲ. ವೀಕ್ಷಕರು ಕೇವಲ ಅವರ ಜಗಳವನ್ನು ನೋಡಲು ಪ್ರತಿನಿತ್ಯ ಒಂದು ಗಂಟೆ ಕುಳಿತುಕೊಳ್ಳಲು ತಯಾರಿಲ್ಲ. ಅವರಿಂದ ನಮಗೇನಾದರೂ ಉಪಯೋಗವಿದೆಯೇ ಎಂಬುದನ್ನು ನೋಡಲು ಕುತೂಹಲದಿಂದ ಕುಳಿತಿರುತ್ತಾರೆ.

ಸೆಲೆಬ್ರಿಟಿಗಳಿಗೆ ಒಂದು ನೆನಪಿರಬೇಕು, ತಾವು ಬೆಳೆಯಲು ಜನ ಸಾಮಾನ್ಯರು ಮುಖ್ಯವಾಗಿದ್ದಾರೆ ಎನ್ನುವುದು. ಜನಸಾಮಾನ್ಯ ಸ್ಪರ್ಧಿಗಳಿಗೆ ನೋವಾದರೆ ಸೆಲೆಬ್ರಿಟಿಗಳು ಬಂದು ಸಮಾಧಾನದ ಮಾತನ್ನು ಹೇಳುತ್ತಿಲ್ಲ.

–ಉಷಾ ಗೌಡ, ಉಪ್ಪಿನಂಗಡಿ

## ಹುಸಿಯಾದ ನಿರೀಕ್ಷೆ

ಝೀ ಕನ್ನಡದಲ್ಲಿ ಬರುವ ಡಾನ್ಸ್ ಕರ್ನಾಟಕ ಡಾನ್ಸ್‌ನ ಒಂದು ಕಂತಿನಲ್ಲಿ ಸಾರೆಗಮಪದ ಶ್ರೀಹರ್ಷ ಅವರು ಡಾನ್ಸ್ ಮಾಡಿದ್ದು ಅವರ ಪ್ರತಿಭೆಗೆ ಕನ್ನಡಿ ಹಿಡಿದಂತಿತ್ತು. ಸಾರೆಗಮಪ ಕಾರ್ಯಕ್ರಮವೇ ಮನಸ್ಸಿಗೆ ಮುದ ನೀಡುವಂತಿತ್ತು. ಶ್ರೀಹರ್ಷ ಅವರ ಹಾಡಿಗಾಗಿ ವಾರವಿಡೀ ಕಾಯುತ್ತಿದ್ದ ನಮಗೆ ಅವರು ಎಂದೂ ನಿರಾಶೆ ಮಾಡಲಿಲ್ಲ. ಆದರೆ ವಿವಿಧ ಬಗೆಯ ಹಾಡುಗಳನ್ನು ಹಾಡಿ ಎಲ್ಲರ ಮನ ಗೆದ್ದ ಪ್ರತಿಭಾನ್ವಿತ ಶ್ರೀ ಹರ್ಷ ಅವರಿಗೆ ಫೈನಲ್‌ನಲ್ಲಿ ಸಿಕ್ಕ ಫಲಿತಾಂಶದಿಂದ ನಮ್ಮ ಮನಸ್ಸಿಗೆ ಬೇಸರವಾಯಿತು.

–ಮೇಘನಾ ಜಯತೀರ್ಥ, ಧಾರವಾಡ

## ವಾರದ ಪತ್ರ
## ಮನ ಕೆಡಿಸುವ ಟಿವಿ

ಜ್ಯೋತಿಷ, ಭವಿಷ್ಯ, ಶಾಸ್ತ್ರಗಳ ಮೂಲಕ ಜನರ ಮನಸ್ಸು ಕೆಡಿಸುತ್ತಿರುವಲ್ಲಿ ಟಿವಿ ವಾಹಿನಿಗಳದ್ದು ಪ್ರಮುಖ ಪಾತ್ರವಾಗಿದೆ. ಪ್ರತಿಯೊಂದು ವಾಹಿನಿಯಲ್ಲೂ ಪೈಪೋಟಿಯ ಮೇಲೆ ದಿನಕ್ಕೆ 2–3 ಗಂಟೆಗಳ ಸಮಯ ಈ ಕಾರ್ಯಕ್ರಮ ಇದ್ದೇ ಇರುತ್ತದೆ. ಇನ್ನು ಧಾರಾವಾಹಿಗಳಲ್ಲಿ ಅತಿಮಾನುಷ ಶಕ್ತಿ ಅದರಲ್ಲೂ ನಾಗದೇವತೆಯದು ಪ್ರಮುಖ ಪಾತ್ರ ಮತ್ತು ಮಾಟ, ಮಂತ್ರ, ಮೂಢನಂಬಿಕೆ ಪ್ರಮುಖ ವಿಷಯ. ಇನ್ನು ಹಬ್ಬಗಳು ಬಂತೆಂದರೆ ಶಾಸ್ತ್ರ ಸಂಪ್ರದಾಯಗಳ ವೈಭವೀಕರಣ.

ಜನರಿಗೆ ಸರಳತೆ, ಒಳ್ಳೆಯ ಮಾರ್ಗದರ್ಶನ ಕೊಡುವ ಬದಲು ಹಾಡು ಹಗಲೇ ಜನರ ಮನಸ್ಸನ್ನು ಕೆಡಿಸಿ ಮೂರ್ಖರನ್ನಾಗಿಸುವ ಕೆಲಸ ಈ ಮೂರ್ಖರ ಪೆಟ್ಟಿಗೆ ಮಾಡುತ್ತಿದೆ.

–ವೀಣಾ ಶಂಕರ್, ಬೆಂಗಳೂರು

## ಎಚ್ಚರಿಕೆ ಬೇಕು

ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಡಾನ್ಸ್ ಕರ್ನಾಟಕ ಡಾನ್ಸ್' ಕಾರ್ಯಕ್ರಮದಲ್ಲಿ ಹುಚ್ಚು ಸಾಹಸ ಪ್ರದರ್ಶಿಸಲು ಹೋಗಿ ಸ್ಪರ್ಧಿ ಸುನಿಲ್ ಗುಜಗುಂಡ ತನ್ನೆರಡೂ ಕಾಲು ಮುರಿದುಕೊಂಡ. ಇನ್ನೊಬ್ಬಾಕೆ ಸಹ ಕಲಾವಿದ ಡಿಕ್ಕಿಯಾದುದರಿಂದ ಹಲ್ಲು ಮತ್ತು ಕೈ ಮುರಿತಕ್ಕೆ ಒಳಗಾದಳು. ಈ ಸಂಗತಿಗಳು ವೀಕ್ಷಕರಿಗೆ ಗಾಬರಿ ಮೂಡಿಸುವಂತಿವೆ. ಇಂದು ನೋಡಿ ನಾಳೆ ಮರೆಯುವ ರಿಯಾಲಿಟಿ ಶೋಗಳಿಗಾಗಿ ಸ್ಪರ್ಧಿಗಳು ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಅಪಾಯಕಾರಿ ಸಾಹಸಗಳಿಗೆ ಮುಂದಾಗಬಾರದು.

–ದೀಪಕ್ ಕಂಬದಕೋಣೆ, ಕುಂದಾಪುರ

## ನೆಮ್ಮದಿಯ ನಿದ್ದೆ ಮಾಡಿ!

'ಕಲರ್ಸ್ ಸೂಪರ್' ವಾಹಿನಿಯಿಂದ ಪ್ರಸಾರವಾಗುತ್ತಿರುವ ಕನ್ನಡ ಧಾರಾವಾಹಿ 'ಮಂಗ್ಳೂರ ಹುಡ್ಗಿ, ಹುಬ್ಳಿ ಹುಡುಗ' ಅತ್ಯಂತ ಮನೋರಂಜಕ, ಹಾಸ್ಯ ಧಾರಾವಾಹಿ.

ತಲೆ ತಿನ್ನುವ, ತಲೆನೋವು ತರುವ ಧಾರಾವಾಹಿ ನೋಡುವುದಕ್ಕಿಂತ ಈ ಧಾರಾವಾಹಿಯನ್ನು ರಾತ್ರಿ ನೋಡಿ ಮಲಗಿದರೆ ನೆಮ್ಮದಿಯ ನಿದ್ದೆ ಗ್ಯಾರಂಟಿ, ಆರೋಗ್ಯಕ್ಕೂ ಚೇತೋಹಾರಿ! ಮರಳುಗಾಡಿನಲ್ಲಿ ಅಪರೂಪಕ್ಕೊಮ್ಮೆ ಸಿಗುವ ನೀರಿನಂತಿದೆ ಈ ಧಾರಾವಾಹಿ.

–ನಾರಾಯಣ ಯಾಜಿ, ಶಿರಾಲಿ

## ಪೌರಾಣಿಕ ಧಾರಾವಾಹಿ ಚೆಂದ

ಕಲರ್ಸ್ ಕನ್ನಡ ವಾಹಿನಿಯಲ್ಲಿ 'ಶನಿ' ಧಾರಾವಾಹಿ ಆರಂಭವಾಗಿದೆ. ಸುವರ್ಣದ ಹರ ಹರ ಮಹಾದೇವಕ್ಕೆ ಸಾಟಿಯಾಗುವಂತೆ ಬರುತ್ತಿರುವ 'ಶನಿ' ಧಾರಾವಾಹಿ ತೀರಾ ವಿಭಿನ್ನ ವಸ್ತುವನ್ನು ಒಳಗೊಂಡಿದೆ. ಸಪ್ತಮ ಗ್ರಹಚಾರ ಶನಿಯ ಬಗೆಗೆ ಇರುವ ಅವ್ಯಕ್ತ ಭೀತಿಯನ್ನು ಈ ಧಾರಾವಾಹಿ ಹೋಗಲಾಡಿಸಲಿದೆ ಎನ್ನುವುದೇ ಸಂತಸದ ಸಂಗತಿ.

ಮನೆ ಮುರುಕು ಧಾರಾವಾಹಿಗಳನ್ನು ನೋಡಿ ಬೇಸತ್ತಿದ್ದವರಿಗೆ ಈಗ ಪೌರಾಣಿಕ ಧಾರಾವಾಹಿ ನೋಡುವ ಅವಕಾಶ ದೊರೆತಿದೆ. ನಮ್ಮ ಪುರಾಣ ವಸ್ತುಗಳು ಎಂದೆಂದಿಗೂ ಜೀವಂತವಾಗಿರುತ್ತವೆ ಎನ್ನುವುದಕ್ಕೆ 'ಶನಿ' ಧಾರಾವಾಹಿಯೇ ಸಾಕ್ಷಿ. ಎಲ್ಲಾ ವಾಹಿನಿಗಳು ಕನಿಷ್ಠ ಒಂದಾದರೂ ಪುರಾಣ ವಸ್ತುವಿನ ಧಾರಾವಾಹಿ ಪ್ರಸಾರ ಮಾಡಿದರೆ ನಮ್ಮ ಯುವಪೀಳಿಗೆಗೆ ಪುರಾಣಗಳ ಪರಿಚಯವಾದರೂ ಆಗುತ್ತದೆ.

–ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

## ಶನಿ ಬಂದಿದ್ದಾನೆ..

ಕಲರ್ಸ್ ಕನ್ನಡದಲ್ಲಿ ಈಗ ಪ್ರಸಾರವಾಗುತ್ತಿರುವ ಶನಿ ಧಾರಾವಾಹಿಗಾಗಿ ರಾತ್ರಿ ಚಾತಕ ಪಕ್ಷಿಯಂತೆ ಕಾಯುವಂತಾಗಿದೆ. ಶನಿ ಪಾತ್ರಧಾರಿ ಬಾಲಕನ ಚುರುಕು ಕಣ್ಣು, ಹಿಗ್ಗಿದ ಮೂಗು, ಗಾಂಭೀರ್ಯ ನೋಡಿದರೆ ಶನಿ ದೇವರು ಹೀಗೇ ಇರಬಹುದೇನೊ ಎಂಬ ಕಲ್ಪನೆ ಮೂಡುತ್ತದೆ. ಬಹುತೇಕ ಎಲ್ಲ ಪೌರಾಣಿಕ, ದೇವತೆಗಳ ಕಥೆಗಳು ಪ್ರಸಾರವಾಗಿದ್ದವು. ಶನಿ ಕಥೆ ಇದೇ ಮೊದಲು. ಬ್ರಹ್ಮಾಂಡದ ಪಾಪ ಕರ್ಮಗಳಿಗೆ ಶಿಕ್ಷೆ ನೀಡುವ ನ್ಯಾಯಾಧೀಶನ ಪೂರ್ವಾಪರ ತಿಳಿಸಲು ಪ್ರಯತ್ನಿಸುತ್ತಿರುವುದು ಇದೇ ಮೊದಲು.

–ರತ್ನ ಅಶೋಕ ಗೊರವರ

## ಮರಂಜನೆಯಲ್ಲ, ವೇದನೆ

ಟಿವಿಯಲ್ಲಿ ಬರುತ್ತಿರುವ ಧಾರಾವಾಹಿಗಳಿಗೆ ಯಾವ ರೀತಿಯ ನೀತಿ ನಿಯಮಗಳೂ ಇದ್ದಂತೆ ಕಾಣುತ್ತಿಲ್ಲ. ವೀಕ್ಷಿಸುವವರಿಗೆ ಮನರಂಜನೆಗಿಂತ ತೀವ್ರ ಬೇಸರ ಮೂಡುತ್ತಿದೆ. ಅದರಲ್ಲೂ ವಯಸ್ಸಾದವರಿಗೆ ಇದು ಮನರಂಜನೆಯ ಮಾಧ್ಯಮ ಎನ್ನಿಸುವುದೇ ಇಲ್ಲ. ಇರುವ 30 ನಿಮಿಷಗಳಲ್ಲಿ 12– 13 ನಿಮಿಷ ಜಾಹೀರಾತುಗಳು, ಅಲ್ಲದೆ ಹಿಂದಿನ ಸಂಚಿಕೆ ತುಣುಕುಗಳು, ಮಧ್ಯೆ ಮುಂದಿನ ಭಾಗದ ತುಣುಕುಗಳು, ಕೊನೆಯಲ್ಲಿ ನಾಳಿನ ಸಂಚಿಕೆಯ ತುಣುಕುಗಳಲ್ಲಿ ಕೆಲವು ನಿಮಿಷಗಳೇ ಮುಗಿಯುತ್ತವೆ. ಎಲ್ಲಾ ಸೇರಿ ಧಾರಾವಾಹಿಗೆ 15 ನಿಮಿಷ ಉಳಿಯುವುದೇ ಕಷ್ಟ. ಅದರಲ್ಲೂ ಅನಾವಶ್ಯಕವಾಗಿ ಕಥೆಯನ್ನು ಚೂಯಿಂಗ್‌ಗಮ್ಮಿನಂತೆ ಎಳೆಯುವುದು. ಯಾವುದೋ ಕುತೂಹಲದ ದೃಶ್ಯವನ್ನು ವಾರದಿಂದ ಪದೇ ಪದೇ ತುರುಕಿ ತೋರಿಸುವುದು ವೀಕ್ಷಕರಿಗೆ ತೀರ ಹಿಂಸೆಯಾಗುತ್ತದೆ. ಹಾಗಾದರೆ ಟಿ.ವಿ. ಆಫ್ ಮಾಡುವುದು, ಚಾನೆಲ್ ಬದಲಾಯಿಸುವುದು ಮಾಡಬಹುದಾದರೂ ಟಿ.ವಿ. ಇರುವುದಾದರೂ ಏತಕ್ಕೆ, ಹೊರಗಡೆ ಹೋಗಲಾರದವರು ಏನು ಮಾಡಬೇಕು? ಇದಕ್ಕೆಲ್ಲಾ ಸಂಬಂಧಿಸಿದವರು ಯಾವ ರೀತಿಯ ಪರಿಹಾರವನ್ನೂ ಏಕೆ ಕೈಗೊಳ್ಳುತ್ತಿಲ್ಲ? ಪತ್ರಿಕೆಗಳಲ್ಲೂ ಈ ಬಗ್ಗೆ ಟೀಕೆಗಳು ಬಂದರೂ ಪ್ರಯೋಜನವಾಗುತ್ತಿಲ್ಲ. ಇದಕ್ಕೆ ಕೊನೆ ಇಲ್ಲವೆ?

–ನಾಗರಾಜ, ಅರಸೀಕೆರೆ